# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕದಲ್ಲಿ "ಒಮ್ಮೆ ಮಾತ್ರ ಕೇಳಿ" (Ask Only Once) ತತ್ವವನ್ನು ಅನುಷ್ಠಾನಗೊಳಿಸುವ ಕುರಿತು

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರವು ತನ್ನ ಯೋಜನೆ / ಕಾರ್ಯಕ್ರಮಗಳ ಮೂಲಕ ರಾಜ್ಯದಲ್ಲಿ ನೆಲೆಸಿರುವ ನಾಗರಿಕರು ಅಥವಾ ಕುಟುಂಬಗಳಿಗೆ ವಿವಿಧ ಕಲ್ಯಾಣ ಸೌಲಭ್ಯಗಳನ್ನು ಒದಗಿಸುತ್ತಿದೆ. ಅಲ್ಲದೇ ಸರ್ಕಾರವು ನಾಗರಿಕರಿಗೆ ಹಲವು ಸೇವೆಗಳನ್ನು ಸಹ ನೀಡುತ್ತಿದೆ. ಸೌಲಭ್ಯ ಮತ್ತು ಸೇವೆಗಳ ಬಗ್ಗೆ ನಾಗರಿಕರು ಅರ್ಜಿ ಸಲ್ಲಿಸಿದಾಗ ಅವುಗಳನ್ನು ನೀಡಲಾಗುತ್ತಿದೆ. ನಾಗರಿಕರು ಅವಳ / ಅವನ ಹಕ್ಕು / ಕೋರಿಕೆಯ ಬಗ್ಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಗುರುತಿನ ಚೀಟಿ, ವಿಳಾಸ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಶೈಕ್ಷಣಿಕ ಮಟ್ಟ, ಉದ್ಯೋಗ ಇತ್ಯಾದಿ, ಅಗತ್ಯ ದಾಖಲೆಗಳನ್ನು ನಾಗರಿಕರು ಪ್ರತಿ ಇಲಾಖೆಗೆ ಪದೇ ಪದೇ ಸಲ್ಲಿಸಬೇಕಾಗಿರುವುದರಿಂದ, ನಾಗರಿಕರ ಹಣ, ಕಾಲ ಮತ್ತು ಶ್ರಮ ಒಳಗೊಳ್ಳುತ್ತದೆ. ನಾಗರಿಕರು ಸಲ್ಲಿಸಿದ ದತ್ತಾಂಶದ ಸ್ವರೂಪ ಇಲಾಖೆಯಿಂದ ಇಲಾಖೆಗೆ ಬದಲಾಗುತ್ತಿರುತ್ತದೆ. ಪ್ರತಿ ಇಲಾಖೆಯು ಸಂಗ್ರಹಿಸುವ ಮಾಹಿತಿಯ ನಮೂನೆಯೂ ವಿಭಿನ್ನವಾಗಿರುತ್ತದೆ. ದತ್ತಾಂಶದಲ್ಲಿನ ಅಸಂಗತತೆಗಳು ಇಲಾಖೆಗಳ ಮಧ್ಯೆ ದತ್ತಾಂಶ ಹಂಚಿಕೆ ಮತ್ತು ಸಂಸ್ಕರಣೆ ಮೇಲೆ ಪರಿಣಾಮ ಬೀರುತ್ತದೆ.

ಕರ್ನಾಟಕ ಸರ್ಕಾರವು ಸೇವಾ ಕೇಂದ್ರಿತ ಮಾರ್ಗವನ್ನು ಅಳವಡಿಸಿಕೊಂಡಿದೆ ಮತ್ತು ತನ್ನ ಇ-ಆಡಳಿತ ಯೋಜನೆಗಳಲ್ಲಿ ನಾಗರಿಕರ ಅಗತ್ಯತೆಗಳು ಮತ್ತು ಸಂಬಂಧಗಳ ಮೇಲೆ ಗಮನ ಕೇಂದ್ರೀಕರಿಸಿದೆ. ಈ ಮಾರ್ಗದ ಭಾಗವಾಗಿ ಹಕ್ಕು ನಿರ್ವಹಣಾ ವ್ಯವಸ್ಥೆ ಮತ್ತು ಸಾಮಾಜಿಕ ರಕ್ಷಣಾ ವ್ಯವಸ್ಥೆಯಾಗಿರುವ "ಕುಟುಂಬ" ಯೋಜನೆಯನ್ನು ಸರ್ಕಾರವು ಅನುಷ್ಠಾನಗೊಳಿಸಿದೆ. ಕುಟುಂಬದಲ್ಲಿನ ಸಾಮಾಜಿಕ ನೋಂದಣಿಯು ಕ್ರಿಯಾತ್ಮಕ, ಸ್ವಯಂ-ಪರಿಷ್ಕರಣೆ ನೋಂದಾವಣೆಯಾಗಿದ್ದು, ದತ್ತಾಂಶ ಸಂಗ್ರಹಣೆ / ಹಂಚಿಕೆಗಾಗಿ ಹಲವಾರು ಇಲಾಖೆಯ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳೊಂದಿಗೆ ಸಂಯೋಜನೆಗೊಂಡಿವೆ. ಕುಟುಂಬದಲ್ಲಿನ ಈ ಸಾಮಾಜಿಕ ನೋಂದಣಿಯು ಕಲ್ಯಾಣ ಸೌಲಭ್ಯಗಳನ್ನು ಒದಗಿಸಲು ಅಗತ್ಯವಿರುವ ನಾಗರಿಕ ಮಾಹಿತಿಯನ್ನು ಒಳಗೊಂಡಿದೆ. ಇಲಾಖೆಯ ದತ್ತಸಂಚಯದಿಂದ ಮಾಹಿತಿ ಸಂಗ್ರಹಿಸಿರುವುದರಿಂದ, ಅದು ಅಧಿಕೃತ ಮತ್ತು ಪರಿಶೀಲಿಸಲ್ಪಟ್ಟ ಮಾಹಿತಿಯಾಗಿರುತ್ತದೆ. ನಾಗರಿಕರಿಗೆ ಅರ್ಜಿ ಸಲ್ಲಿಸದೆಯೇ ಅವರು ಅರ್ಹರಿರುವ ಸೇವೆಗಳನ್ನು ಸ್ವಯಂಪ್ರೇರಿತವಾಗಿ ವಿತರಿಸಲು ಕುಟುಂಬದಲ್ಲಿನ ದತ್ತಾಂಶಗಳನ್ನು ಸರ್ಕಾರವು ಬಳಸುತ್ತಿದೆ. ನಾಗರಿಕರಿಂದ ಅರ್ಜಿ ಸ್ವೀಕರಿಸುವ ಹಲವಾರು ತಂತ್ರಾಂಶಗಳನ್ನು ಕುಟುಂಬದೊಂದಿಗೆ ಸಂಯೋಜಿಸಲಾಗಿದ್ದು, ಸದರಿ ತಂತ್ರಾಂಶಗಳಲ್ಲಿರುವ ಅರ್ಜಿಗಳಲ್ಲಿನ ಮಾಹಿತಿಯನ್ನು ಕುಟುಂಬ ಗುರುತಿನ ಸಂಖ್ಯೆ ಆಧಾರದಲ್ಲಿ ಸ್ವಯಂ ಭರ್ತಿ ಮಾಡಲಾಗುತ್ತಿದೆ.

ಸಮಯ ಮತ್ತು ಸಂವಹನ ವೆಚ್ಚಗಳನ್ನು ಕಡಿಮೆ ಮಾಡುವುದು, ಸೇವೆಗಳನ್ನು ಒದಗಿಸುವಲ್ಲಿ ವಿಳಂಬವನ್ನು ಕಡಿಮೆ ಮಾಡುವುದು ಮತ್ತು ನಾಗರಿಕರಿಗೆ ವ್ಯಕ್ತಿಗತ ಮತ್ತು ಸ್ಥಿರ ಅನುಭವವನ್ನು ಒದಗಿಸುವ ಮೂಲಕ ಸರ್ಕಾರದೊಂದಿಗಿನ ನಾಗರಿಕರ ಸಂವಹನವನ್ನು ಇನ್ನಷ್ಟು ಸುಧಾರಿಸುವ ಗುರಿಯನ್ನು ಸರ್ಕಾರ ಹೊಂದಿರುತ್ತದೆ. ಈ ನಿಟ್ಟಿನಲ್ಲಿ "ಒಮ್ಮೆ ಮಾತ್ರ ಕೇಳಿ" (Ask Only Once) ಎಂಬ ತತ್ವವನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಒಮ್ಮೆ ಮಾತ್ರ ಕೇಳಿ ಎಂಬ ತತ್ವವು ನಾಗರಿಕರು ಸರ್ಕಾರಕ್ಕೆ ಒಂದು ಬಾರಿ ಮಾತ್ರ ಮಾಹಿತಿಯನ್ನು ಸಲ್ಲಿಸಬೇಕಾಗುವುದನ್ನು ಸಾಧ್ಯವಾಗಿಸುತ್ತದೆ ಮತ್ತು ಸರ್ಕಾರಕ್ಕೆ ನಾಗರಿಕರು ಒಂದು ಇಲಾಖೆಗೆ ಒದಗಿಸಿದ ಮಾಹಿತಿಯನ್ನು ಮರುಬಳಕೆ ಮಾಡಲು ಮತ್ತು ಸದರಿ ಮಾಹಿತಿಯನ್ನು ಇತರ ಇಲಾಖೆಗಳೊಂದಿಗೆ ಹಂಚಿಕೊಳ್ಳಲು ಅನುವು ಮಾಡುತ್ತದೆ. ಇದು ದಕ್ಷ, ಸುಲಭ ಮತ್ತು ನಾಗರಿಕರ ಅಗತ್ಯಗಳಿಗೆ ಸ್ಪಂದಿಸುವ ಅನುಭವಕ್ಕೆ ಕಾರಣವಾಗುತ್ತದೆ.

ಮೇಲಿನ ಅಂಶಗಳ ಮೇರೆಗೆ, "ಒಮ್ಮೆ ಮಾತ್ರ ಕೇಳಿ" (Ask Only Once) ಎಂಬ ತತ್ವವನ್ನು ಅನುಷ್ಠಾನಗೊಳಿಸಲು "ಕುಟುಂಬ" ದಲ್ಲಿರುವ ಸಾಮಾಜಿಕ ನೋಂದಣಿಯ ದತ್ತಾಂಶವನ್ನು ಬಳಸಿಕೊಳ್ಳಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ:

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಪಿಆರ್‌ಜೆ 2022**
**ಬೆಂಗಳೂರು, ದಿನಾಂಕ: 05-02-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, "ಒಮ್ಮೆ ಮಾತ್ರ ಕೇಳಿ" (Ask Only Once) ಎಂಬ ತತ್ವವನ್ನು ಕರ್ನಾಟಕದ ಇ-ಆಡಳಿತ ಉಪಕ್ರಮಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಆದೇಶಿಸಿದೆ. "ಕುಟುಂಬ"ದಲ್ಲಿನ ಅಧಿಕೃತ ಮತ್ತು ಪರಿಶೀಲಿಸಿದ ದತ್ತಾಂಶವನ್ನು ಎಲ್ಲಾ ಸರ್ಕಾರಿ ಇಲಾಖೆಗಳು ಬಳಸಲು ಮತ್ತು ಕಲ್ಯಾಣ ಸೌಲಭ್ಯಗಳನ್ನು ಒದಗಿಸಲು ನಾಗರಿಕರಿಂದ ದಾಖಲೆಗಳ ಪುರಾವೆಗಳನ್ನು ಕೇಳದಿರಲು ಸರ್ಕಾರವು ಆದೇಶಿಸಿದೆ. ವಿವಿಧ ಇಲಾಖೆಗಳ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳನ್ನು "ಕುಟುಂಬ"ದೊಂದಿಗೆ ಸಂಯೋಜಿಸಿ "ಕುಟುಂಬ"ದಿಂದ ನಾಗರಿಕರ ಮಾಹಿತಿಯನ್ನು ಪಡೆದುಕೊಳ್ಳಲು ಎಲ್ಲಾ ಸಂಬಂಧಿಸಿದ ಇಲಾಖೆಗಳು ಅನುವು ಮಾಡಿಕೊಡುವುದು.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 9 ಪಿಆರ್‌ಜೆ 2020, ದಿನಾಂಕ : 07-10-2020 ರಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಚಾಲನಾ ಸಮಿತಿಯು ಅನುಮೋದಿಸಿದ ಕುಟುಂಬದಲ್ಲಿನ ಅಧಿಕೃತ ಮತ್ತು ಪರಿಶೀಲಿಸಿದ ದತ್ತಾಂಶಗಳನ್ನು ಸರ್ಕಾರದ ಇಲಾಖೆಗಳು ಬಳಸುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)ಯು ಕಾಲ ಕಾಲಕ್ಕೆ ಸರ್ಕಾರದ ಆದೇಶವನ್ನು ಹೊರಡಿಸುವುದು.

"ಒಮ್ಮೆ ಮಾತ್ರ ಕೇಳಿ" (Ask Only Once) ಎಂಬ ತತ್ವವನ್ನು ಅನುಷ್ಠಾನಗೊಳಿಸಲು ಇಲಾಖೆಗಳು ಅನುಸರಿಸಬೇಕಾದ ಕಾರ್ಯವಿಧಾನ / ಪ್ರಕ್ರಿಯೆ ಕುರಿತು ಮಾರ್ಗಸೂಚಿಗಳು / ನಿರ್ದೇಶನಗಳು / ಸುತ್ತೋಲೆಗಳು / ಸರ್ಕಾರಿ ಆದೇಶ / ಅಧಿಸೂಚನೆಗಳನ್ನು ಹೊರಡಿಸುವ ಅಧಿಕಾರವನ್ನು ಸಹ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ (ಇ-ಆಡಳಿತ) ಇಲಾಖೆಗೆ ಪ್ರತ್ಯಾಯೋಜಿಸಲಾಗಿದೆ. ಎಲ್ಲಾ ಸರ್ಕಾರಿ ಇಲಾಖೆಗಳು, ಮಂಡಳಿಗಳು, ನಿಗಮಗಳು ಮತ್ತು ಸ್ವಾಯತ್ತ ಸಂಸ್ಥೆಗಳು ತಪ್ಪದೇ ಅನುಸರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಂ.ಎನ್.ಶ್ರೀವತ್ಸ 5/2/22
(ಎಂ.ಎನ್.ಶ್ರೀವತ್ಸ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ
ಇಲಾಖೆ (ಇ-ಆಡಳಿತ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿ,

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು ವಿಧಾನಸೌಧ / ವಿಕಾಸಸೌಧ / ಬಹುಮಹಡಿ ಕಟ್ಟಡ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು- ಸಂಬಂಧಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ.
8. ಎಲ್ಲಾ ಮಂಡಳಿಗಳು / ನಿಗಮಗಳು / ಅಧಿಕಾರಗಳು / ಸ್ವಾಯತ್ತ ಸಂಸ್ಥೆಗಳು - ಸಂಬಂಧಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ.
9. ಎಲ್ಲಾ ಜಿಲ್ಲಾಧಿಕಾರಿಗಳು - ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಮುಖಾಂತರ
10. ಎಲ್ಲಾ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಾಕ ಅಧಿಕಾರಿಗಳು – ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಮುಖಾಂತರ
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
14. ಶಾಖಾ ರಕ್ಷಾ ಕಡತ.

# Proceedings of Government of Karnataka

**Sub:** Implementation of **Ask Only Once** principle in Karnataka.

**Preamble:**

Government of Karnataka disburses several welfare benefits to citizens or families residing in Karnataka through its schemes/programmes.Government also delivers services to citizens. Disbursement of benefits or delivery of services is carried out as and when citizen applies for the same. The citizen is required to submit documents in support of her/his claim/request. Documents supporting proof of Identity, proof of Address, Caste and Income, Education level, occupation etc are to be submitted by the citizen repeatedly to each department and this involves cost, time and effort of the citizen. The consistency of data submitted by the citizen varies across department and the format in which it is stored by each department also differs. Inconsistencies in the data impacts data sharing and processing between departments.

Government of Karnataka has adopted a service-centered approach and focuses on citizen needs and concerns in its e-Governance projects. As part of this approach, Government has implemented "**Kutumba**" which is an Entitlement Management System and a Social Protection System. Social Registry within Kutumba is a dynamic, self-updating registry which is integrated with several department IT systems for collection/sharing of data. This Social Registry within Kutumba contains the citizen data required for delivery of welfare benefits. As the data is collected from department databases, it is authentic and verified. Government is utilizing data in Kutumba to suo-moto deliver entitled services to eligible citizens without them having to apply. Kutumba is also integrated with several citizen facing applications of departments which fetch citizen data from Kutumba and auto fill the forms being submitted by the citizen.

Government aims to further improve citizen interactions with the Government by means of minimizing time and interaction costs, reduce delay in delivery of services and provide personalized and consistent user experience to citizens. Towards this, the principle of **Ask Only Once** is considered for implementation in Karnataka. Ask Only Once principle will ensure that citizens do not have to submit the information more than once to the Government and Government will be able to re-use the information provided by citizen to

one department and share it with other departments. This will also result in an experience that is efficient, easy, and responsive to the needs of citizens.

In view of the above, Government has decided to utilise the data in the Social Registry of Kutumba to implement the principle of Ask Only Once. Hence this order:

**GOVERNMENT ORDER No DPAR 16 PRJ 2022**
**BENGALURU, Dated: 05-02-2022**

For the reasons explained in the preamble, Government approves implementation of Ask Only Once principle in the e-Governance initiatives of Karnataka. The authentic and verified data in Kutumba shall be used by all Government Departments and Departments shall not seek proof of documents from the citizen for delivery of welfare benefits.The IT systems of various departments shall integrate with Kutumba and enable fetch information of citizen from Kutumba.

The Department of Personnel and Administrative Reforms (e-Governance) from time to time with the approval of Steering Committee under the chairpersonship of Additional Chief Secretary, Government of Karnataka constituted vide GO No DPAR 9 PRJ 2020 dated 7th Oct 2020 would issue notification under this Government Order indicating the data fields in Kutumba to be used by Government Departments as authentic and verified data.

Government also authorises Department of Personnel and Administrative Reforms (e-Governance) to issue the procedure/process to be followed by departments for implementing the principle of Ask Only Once in the form of guidelines/directions/circulars/Government order/Notifications. All Government Departments, Boards, Corporations and Autonomous Bodies shall follow them without fail.

(ಈ ಆದೇಶವನ್ನು ಕನ್ನಡದಲ್ಲಿಯೂ ಹೊರಡಿಸಲಾಗುತ್ತಿದೆ)

By Order and in the name of the
Governor of Karnataka

(M.N Srivatsa) 5/2/22
Under Secretary to Government
Department of Personnel and Administrative
Reforms (e-Governance)

To:
The Compiler, Karnataka Gazette to publish in the Extra-Ordinary Gazette and to supply 50 copies to this Department.
Copy to:

1. The Chief Secretary to Government of Karnataka, Vidhana Soudha, Bengaluru.

2. The Additional Chief Secretary to Hon'ble Chief minister, Vidhana Soudha, Bengaluru.
3. The Additional Chief Secretary to Government, Vidhana Soudha, Bengaluru.
4. The Additional Chief Secretary & Development Commissioner, VidhanaSoudha, Bengaluru.
5. All the Additional Chief Secretary/Principal secretary/Secretary to Government, Vidhana Soudha/Vikasa Soudha/M.S.Building, Bengaluru.
6. The Chief Executive Officer, Centre for e-Governance, M.S.Building, Bengaluru.
7. All Heads of Departments-through the concerned Additional Chief Secretary/Principal secretary/Secretary to Government.
8. All Boards/Corporations/Authorities/Autonomous Bodies- through the concerned Additional Chief Secretary/Principal secretary/Secretary to Government.
9. All Deputy Commissioners-through Principal Secretary to Government, Revenue Department.
10. All Chief Executive Officers of Zilla Panchayaths-through Principal Secretary to Government, Rural Development and Panchayath Raj Department.
11. The Private Secretary to Additional Chief Secretary to Government, Department of Personnel and Administrative Reforms (e-governance), M.S.Building, Bengaluru.
12. The Personal Assistant to Additional Secretary to Government, Department of Personnel and Administrative Reforms (e-governance), M.S.Building, Bengaluru.
13. To publish in the Department Website.
14. Section Guard File.